# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ

# ಬಳ್ಳಾರಿ

## ಸತ್ರ ಮೊಕದ್ದಮೆ ಸಂಖ್ಯೆಃ18/2026

**ಪಿ.ಡಬ್ಲ್ಯೂಃ2 (ಸಿಡಬ್ಲ್ಯೂಃ14 )**

| | | |
|---|---|---|
| **ಸಾಕ್ಷಿದಾರರ ಹೆಸರು** | : | **ಶ್ರೀ ಶೇಖರ್** |
| **ತಂದೆಯ ಹೆಸರು** | : | **ಸತ್ಯಪ್ಪ** |
| **ವಯಸ್ಸು** | : | **45 ವರ್ಷ** |
| **ಕೆಲಸ** | : | **ವ್ಯವಸಾಯ** |
| **ವಾಸ ಸ್ಥಳ** | : | **ಇಟಗಿ ಗ್ರಾಮ , ಕಂಪ್ಲಿ ತಾಲೂಕು** |

**ಸಾಕ್ಷಿಯನ್ನು ದಿನಾಂಕ 20.08.2026 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ಆರೋಪಿ 1 ಮತ್ತು 2 ಅನುಕ್ರಮವಾಗಿ ನನ್ನ ಚಿಕ್ಕಮ್ಮ ಮತ್ತು ಚಿಕ್ಕಪ್ಪ ಇರುತ್ತಾರೆ. ಚಾಸಾ.1 ನನ್ನ ಅಜ್ಜಿ. ನನ್ನ ಅಜ್ಜಿ ತೀರಿಕೊಂಡು ಈಗಾಗಲೇ 3-4 ವರ್ಷಗಳಾಗಿವೆ. ಮೃತ ಮುರಾರಿಯಮ್ಮ ನನ್ನ ಅತ್ತೆ ಇದ್ದರು. ಆಕೆ ಕಟ್ಟೆ ಮೇಲೆ ಕುಳಿತಿದ್ದು ಜಾರಿ ಬಿದ್ದ ಪರಿಣಾಮ ಗಾಯಗಳು ಸಂಭವಿಸಿ ಸದರಿ ಗಾಯಗಳಿಂದ ಸಾವನ್ನಪ್ಪಿದಳು.

**2.** ಆರೋಪಿತರು ಒನಕೆ ಮತ್ತು ಬಿದಿರು ಕೋಲನ್ನು ಉಪಯೇಗಿಸಿ ಮೃತ ಮುರಾರಿಯಮ್ಮನನ್ನು ಹೊಡೆದಿರುವುದು ನಾನು ನೋಡಿಲ್ಲ. ಆರೋಪಿತರ ವಿರುದ್ಧ ನಾನು ಯಾವುದೇ ಹೇಳಿಕೆ ನೀಡಿಲ್ಲ. ಆದರೆ ಈಗಾಗಲೇ ನುಡಿದಂತೆ ನನ್ನ ಮೃತ ಮುರಾರಿಯಮ್ಮನ ಸಾವಿನ ಬಗ್ಗೆ ಅವರಿಗೆ ತಿಳಿಸಿದೆ. ನಾನು ಯಾವುದೇ ಮರು ಹೇಳಿಕೆ ನೀಡಿಲ್ಲ.

**S.C.No. 18/2026**
**P.W. 2 (C.W.14 )**
**Date : 20.08.2026**

***(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಬೇಕೆಂದು ಕೋರಿದ್ದು, ಕೋರಿಕೆ ಸಮರ್ಪಕವಾಗಿದ್ದು ಪುರಸ್ಕರಿಸಲಾಗಿದೆ ಮತ್ತು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲಾಗಿದೆ. )***

**ಪಾಟಿ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

**3.** ದಿಃ16.11.2019 ರಂದು ಮೃತ ಮುರಾರಿಯಮ್ಮ ತನ್ನ ತಾಯಿ ಚಾಸಾ.1 ರವರನ್ನು ಬೈಯ್ಯುತ್ತಿದ್ದು ಸದರಿ ಬೈಯ್ಯುವಿಕೆಯನ್ನು ತಪ್ಪಾಗಿ ಅರ್ಥೈಸಿಕೊಂಡ ಆರೋಪಿತರು ಒನಕೆ ಮತ್ತು ಬಿದಿರು ದೊಣ್ಣೆಗಳನ್ನು ಉಪಯೋಗಿಸಿ ಮೃತ ಮುರಾರಿಯಮ್ಮನನ್ನು ನಿರಂತರವಾಗಿ ಹಲ್ಲೆ ಮಾಡಿದ ಕಾರಣ ಆಕೆಗೆ ತೀವ್ರ ಸ್ವರೂಪದ ಗಾಯಗಳು ಆಗಿ ಅವುಗಳಿಂದ ಸಾವನ್ನಪ್ಪಿರುತ್ತಾಳೆ ಎಂದರೆ ಸರಿಯಲ್ಲ.

**4.** 1 ನೇ ಆರೋಪಿ ಒನಕೆಯನ್ನು ಉಪಯೋಗಿಸಿ ಮೃತ ಮುರಾರಿಯಮ್ಮನನ್ನು ಆಕೆಯ ತಲೆಯ ಭಾಗದಲ್ಲಿ ಹಲ್ಲೆ ಮಾಡಿ ರಕ್ತಗಾಯ ಮಾಡಿದ ಎಂದರೆ ಸರಿಯಲ್ಲ. 1 ನೇ ಆರೋಪಿ ಬಿದಿರು ಕಟ್ಟಿಗೆಯನ್ನು ಉಪಯೋಗಿಸಿ ಮೃತ ಮುರಾರಿಯಮ್ಮನ ಮೈ ಕೈಗಳಿಗೆ ಹಲ್ಲೆ ಮಾಡಿದಳು ಎಂದರೆ ಸರಿಯಲ್ಲ.

**5.** ಆದರೆ ಟಾಟಾ ಎಸಿ ವಾಹನದಲ್ಲಿ ಮೃತ ಮುರಾರಿಯಮ್ಮನನ್ನು ಚಿಕಿತ್ಸೆಯ ಸಲುವಾಗಿ ಗಂಗಾವತಿ ಆಸ್ಪತ್ರೆಗೆ ಮೊದಲು ನಂತರ ಹುಬ್ಬಳ್ಳಿ ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕಾದರೆ ಮುರಾರಿಯಮ್ಮ ಮೃತ ಹೊಂದಿರುವುದು ನಿಜ.

**6.** ನಾನು ಪೊಲೀಸರಿಗೆ ಈಗ ನನಗೆ ಸೂಚಿಸಿ ಓದಿ ಹೇಳಿದಂತೆ ಅಂದರೆ " ನಾನು ಮೇಲ್ಕಂಡ ...... ಕೇಸು ಕೊಟ್ಟಿರುತ್ತಾಳೆ" ಎಂದು ನಮೂದಿಸಿ ಆರೋಪಿತರ ವಿರುದ್ಧ ಹೇಳಿಕೆ

ನೀಡಿದೆ ಎಂದರೆ ಸರಿಯಲ್ಲ. ಓದಿ ಹೇಳಿದ ಹೇಳಿಕೆಯನ್ನು ಈಗ **ನಿಪಿ.3** ಎಂದು ಗುರುತಿಸಲಾಯಿತು.

**7.** ದಿಃ18.11.2019 ರಂದು ನಾನು ಈಗ ನನಗೆ ಓದಿ ಹೇಳಿದ ಅಂದರೆ " ನಾನು ಮೇಲ್ಕಂಡ ...... ಮೃತ ಪಟ್ಟಿರುತ್ತಾಳೆ" ಎಂದು ಮರು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಓದಿ ಹೇಳಿದ ಮರು ಹೇಳಿಕೆಯ ಭಾಗವನ್ನು **ನಿಪಿ.4** ಎಂದು ಈಗ ಗುರುತು ಮಾಡಲಾಯಿತು.

**8.** ನಾನು ಆರೋಪಿತರೊಂದಿಗೆ ರಾಜಿ ಮಾಡಿಕೊಂಡಿದ್ದು ಅವರಿಗೆ ಅನುಕೂಲ ಮಾಡಲು ಸತ್ಯ ಮರೆಮಾಚಿ ಅಸತ್ಯ ನುಡಿದೆ ಎಂದರೆ ಸರಿಯಲ್ಲ.

## ಪಾಟೀಸವಾಲುಃ ಆರೋಪಿ ಪರ ವಕೀಲರಿಂದ:

**ಇಲ್ಲಃ**

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)**

**ಓ.ಹೇ.ಕೆ. ಸರಿ ಇದೆ.**

\

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಬಳ್ಳಾರಿ.**